| ಕರ್ನಾಟಕ ವಿಧಾನ ಪರಿಷತ್ | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 551(638) |
| ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09-03-2026 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಪ್ರಸ್ತುತ ಒಟ್ಟು ಅರಣ್ಯ ವಿಸ್ತೀರ್ಣ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಏರಿಕೆ/ಇಳಿಕೆ ಪ್ರಮಾಣ ಎಷ್ಟು; | • ರಾಜ್ಯದ ಪ್ರಸ್ತುತ ಒಟ್ಟು ಅರಣ್ಯ ವಿಸ್ತೀರ್ಣವು 40,678.23 ಚದರ ಕಿಲೋಮೀಟರ್ ಆಗಿರುತ್ತದೆ.<br>• ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶಗಳ ಏರಿಕೆ/ ಇಳಿಕೆ ಪ್ರಮಾಣ ಈ ಕೆಳಗಿನಂತಿದೆ. |

| ಆಡಳಿತ ವರದಿ ವರ್ಷ | ರಾಜ್ಯದ ಅರಣ್ಯ ವಿಸ್ತೀರ್ಣ (ಚ.ಕಿಮೀ ಗಳಲ್ಲಿ) | % ಭೌಗೋಳಿಕ ಪ್ರದೇಶ | ಷರಾ |
|---|---|---|---|
| 2022-23 | 40,649.30 ಚ.ಕಿ.ಮೀ | 21.19 | ಒಟ್ಟು 0.02% ಅರಣ್ಯ ಪ್ರದೇಶದ ಏರಿಕೆ ಆಗಿರುತ್ತದೆ. |
| 2023-24 | 40,678.23ಚ.ಕಿ.ಮೀ | 21.21 | |
| 2024-25 | 40,678.23ಚ.ಕಿ.ಮೀ | 21.21 | |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಅಕ್ರಮ ಅರಣ್ಯ ನಾಶ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು) | ಅಕ್ರಮ ಅರಣ್ಯ ನಾಶ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ.<br>1. ಅರಣ್ಯ ಪ್ರದೇಶದ ಗಡಿ ಬಲವರ್ಧನೆಗಾಗಿ ಸ್ಥಳಕ್ಕೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯಂತೆ ಜಾನುವಾರು ನಿರೋಧಕ ಕಂದಕಗಳು (ಸಿ.ಪಿ.ಟಿ.), ಗಡಿಕಲ್ಲು, ಮುಳ್ಳು ತಂತಿ ಬೇಲಿ, ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದೆ.<br>2. ಪ್ರತಿ ಮಾಹೆಯ ದಿನಾಂಕ 03 ಮತ್ತು 18 ರಂದು ಕ್ಷೇತ್ರ ಮಟ್ಟದ ಸಿಬ್ಬಂದಿಗಳು ಅರಣ್ಯ ಗಡಿಯಲ್ಲಿ ಗಸ್ತು ತಿರುಗುವಿಕೆಯನ್ನು ಇಲಾಖೆಯ ಇ-ಪ್ರಹರಿ ತಂತ್ರಾಂಶವನ್ನು ಉಪಯೋಗಿಸಿಕೊಂಡು ಕೈಗೊಳ್ಳುತ್ತಾರೆ.<br>3. ಅರಣ್ಯ ಅತಿಕ್ರಮಣಗಳನ್ನು ತಾಂತ್ರಿಕ ವ್ಯವಸ್ಥೆ ಮೂಲಕ ಪತ್ತೆ ಹಚ್ಚಲು ಅರಣ್ಯ ಇಲಾಖೆಯು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ(Karnataka State Remote Sensing Applications Centre)ದ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ ಫಾರೆಸ್ಟ್ ಕವರ್ ಚೇಂಜ್ ಅಲರ್ಟ್ ಸಿಸ್ಟಮ್ ಎಂಬ ಆನ್‌ಲೈನ್ ವ್ಯವಸ್ಥೆಯಲ್ಲಿ ಉಪಗ್ರಹ ಚಿತ್ರಗಳ ವಿಶ್ಲೇಷಣೆಯ ಆಧಾರದ ಮೇಲೆ ಅರಣ್ಯದೊಳಗಡೆ ಹಸಿರು ಕವಚದಲ್ಲಿ ಕ್ಷೇತ್ರ ಅಧಿಕಾರಿಗಳಿಗೆ ತಕ್ಷಣವೇ ಮೊಬೈಲ್ ಸಂದೇಶಗಳ ಮೂಲಕ ಎಚ್ಚರಿಕೆಗಳನ್ನು ನೀಡಲಾಗುತ್ತಿದೆ.<br>4. ಅರಣ್ಯ ಒತ್ತುವರಿ ಮಾಡಿಕೊಂಡವರ ಹಾಗೂ ಅಕ್ರಮ ಮರ ಕಡಿತಲೆ / ನಾಶ ಮಾಡುವವರ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ, 1963 ಮತ್ತು ನಿಯಮಾವಳಿ, 1969ರನ್ವಯ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>5. ಅರಣ್ಯ ರಕ್ಷಣೆಗೆ ತೊಡಗಿದ ಕ್ಷೇತ್ರಾಧಿಕಾರಿ / ಸಿಬ್ಬಂದಿಗಳಿಗೆ ಅಗತ್ಯತೆಯಂತೆ ಸರ್ಕಾರಿ ವಾಹನ, ನಿಸ್ತಂತು ಉಪಕರಣಗಳ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಲಾಗುತ್ತಿದೆ. |
| ಇ) | ಅರಣ್ಯ ಅಗ್ನಿ ಪ್ರಕರಣಗಳ ಸಂಖ್ಯೆ ಹಾಗೂ | • ಅರಣ್ಯ ಇಲಾಖೆಯಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ(KSRSAC)ದ ಸಹಯೋಗದಿಂದ Satellite ಮಾಹಿತಿಯ ಆಧಾರದ ಮೇಲೆ ಕಳೆದ ವರ್ಷಗಳಲ್ಲಿ ಸ್ವೀಕರಿಸಿದ ಅರಣ್ಯ ಅಗ್ನಿ |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಅವುಗಳನ್ನು ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳ ವಿವರವೇನು;</td><td>ಸಂದೇಶಗಳ (Forest Fire Alerts) ಸಂಖ್ಯೆ ವಿವರ ಈ ಕೆಳಗಿನಂತಿದೆ.
<table>
<tr><th>ವರ್ಷ</th><th>ಕಾಡ್ಗಿಚ್ಚು ಸಂದೇಶಗಳು (Forest Fire Alerts)</th></tr>
<tr><td>2020</td><td>7,039</td></tr>
<tr><td>2021</td><td>8,321</td></tr>
<tr><td>2022</td><td>7,794</td></tr>
<tr><td>2023</td><td>18,801</td></tr>
<tr><td>2024</td><td>7,942</td></tr>
<tr><td>2025</td><td>12,627</td></tr>
<tr><td>2026 (1ನೇ ಮಾರ್ಚ್ ರವರೆಗೆ)</td><td>6,880</td></tr>
</table>
<ul>
<li>ಅರಣ್ಯ ಅಗ್ನಿ ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ.
<ul>
<li>ಕಾಡ್ಗಿಚ್ಚಿನ ಋತುಮಾನವು ಪ್ರಾರಂಭವಾಗುವ ಸಮಯದಲ್ಲಿ ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ನಿಯಂತ್ರಿತ ಬೆಂಕಿ (Controlled Burning) ಮೂಲಕ ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಕಾಡ್ಗಿಚ್ಚು ತೀವ್ರತೆಯನ್ನು ಕಡಿಮೆಗೊಳಿಸುವುದು;</li>
<li>ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ರೇಖೆಗಳನ್ನು ನಿರ್ಮಾಣ ಹಾಗೂ ನಿರ್ವಹಣೆ ಮಾಡುವುದು;</li>
<li>ಬೇಸಿಗೆ ಕಾಲದಲ್ಲಿ ಅಗತ್ಯತೆಯಂತೆ ಜನವರಿ ಮಾಹೆಯಿಂದ ಮೇ ಮಾಹೆಯವರೆಗೆ ಸ್ಥಳೀಯರನ್ನು ಬೆಂಕಿ ಕಾವಲುಗಾರರನ್ನಾಗಿ ನಿಯೋಜಿಸಿ ಕಾಡ್ಗಿಚ್ಚನ್ನು ತಡೆಗಟ್ಟುವುದು ಹಾಗೂ ನಂದಿಸುವುದು;</li>
<li>ಅರಣ್ಯದಂಚಿನ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಕಾಡ್ಗಿಚ್ಚು ಬೀಳದಂತೆ ತಡೆಗಟ್ಟಲು ತಿಳುವಳಿಕೆ ನೀಡುವುದು;</li>
<li>ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚಿನ ನಿಯಂತ್ರಣಕ್ಕೆ ಅಗತ್ಯವಿರುವ ನೀರಿನ ಲಭ್ಯತೆ ಇರುವ ಸ್ಥಳಗಳನ್ನು ಗುರುತಿಸಿಕೊಳ್ಳುವುದು;</li>
<li>ಅರಣ್ಯ ಪ್ರದೇಶಗಳಲ್ಲಿ ಅಗತ್ಯತೆಯಂತೆ ಸೂಕ್ತ ಸ್ಥಳಗಳಲ್ಲಿ Watch Towers ಗಳ ಮೂಲಕ ಕಾಡ್ಗಿಚ್ಚು ಬೀಳುವ ಸ್ಥಳಗಳಲ್ಲಿ ವೀಕ್ಷಿಸಿ ಸಂಬಂಧಿಸಿದ ಸಿಬ್ಬಂದಿಗಳಿಗೆ ಮೊಬೈಲ್ ಸಂದೇಶದ ಮೂಲಕ ಎಚ್ಚರಿಸುವುದು;</li>
<li>ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಗಳಿಗೆ ತರಬೇತಿಯನ್ನು ಏರ್ಪಡಿಸುವುದು;</li>
<li>ಕಾಡ್ಗಿಚ್ಚು ನಿಯಂತ್ರಣಕ್ಕಾಗಿ ಸಂಬಂಧಿಸಿದ ಇಲಾಖೆಗಳು, ಗ್ರಾಮ ಅರಣ್ಯ ಸಮಿತಿಗಳು (Village Forest Committees/Eco-Development Committee ಗಳು, ಸ್ಥಳೀಯ ಸಂಘ-ಸಂಸ್ಥೆಗಳು ಮತ್ತು ಇತರರ ಸಹಯೋಗ ಪಡೆದುಕೊಳ್ಳಲು ಕಾರ್ಯಕ್ರಮ / ಕಾರ್ಯಗಾರಗಳನ್ನು ಆಯೋಜಿಸುವುದು;</li>
</ul></li>
</ul></td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | • ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ Geospatial Information Portal ನ ಮೂಲಕ Satellite Imageryಯ ಆಧಾರದ ಮೇಲೆ ಸಂಪೂರ್ಣ ಸ್ವಯಂಚಾಲಿತ ಅರಣ್ಯ ಬೆಂಕಿ ಸಂದೇಶ (Forest Fire Alerts) ಗಳನ್ನು ಆಯಾ ಸಿಬ್ಬಂದಿಯ ಮೊಬೈಲ್ ಫೋನಿಗೆ ಕಳುಹಿಸಲಾಗುತ್ತಿದ್ದು, ಸಿಬ್ಬಂದಿಗಳು ಬೆಂಕಿ ಬಿದ್ದ ಕ್ಷೇತ್ರಕ್ಕೆ ಭೇಟಿ ನೀಡಿ ಕಾಡ್ಗಿಚ್ಚನ್ನು ನಂದಿಸಿ, ಛಾಯಾಚಿತ್ರವನ್ನು ಸದರಿ ಪೋರ್ಟಲ್ ಮೂಲಕ ಕ್ರಮ ಕೈಗೊಂಡ ವರದಿಯನ್ನು ಸಲ್ಲಿಸುತ್ತಿರುತ್ತಾರೆ.<br>• ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯ ಸಹಯೋಗದೊಂದಿಗೆ ಅರಣ್ಯ ಇಲಾಖೆಯ ಕೇಂದ್ರ ಸ್ಥಾನದಲ್ಲಿ 24X7 ಕಾಡ್ಗಿಚ್ಚು ಉಸ್ತುವಾರಿ ಕೋಶ (Forest Fire Monitoring Cell) ದ ತಂಡವು ಎಲ್ಲಾ ಅರಣ್ಯ ಬೆಂಕಿ ಸಂದೇಶ(Forest Fire Alerts)ಗಳಿಗೆ ಹಾಗೂ ಅರಣ್ಯ ಇಲಾಖೆಯ ಸಹಾಯವಾಣಿ (Forest Helpline) 1926ರ ಮೂಲಕ ಸಾರ್ವಜನಿಕರಿಂದ ಸ್ವೀಕರಿಸಿದ ಬೆಂಕಿ ಸಂದೇಶಗಳನ್ನು ಸದರಿ ಪೋರ್ಟಲ್ ಮೂಲಕ ಕ್ರಮ ಕೈಗೊಂಡ ವರದಿಯನ್ನು ಸಲ್ಲಿಸಲು ಸಿಬ್ಬಂದಿಗಳನ್ನು ಸ್ಪಂದಿಸಲಾಗುತ್ತಿದೆ.<br>• ಕಾಡ್ಗಿಚ್ಚು ನಿಯಂತ್ರಣಕ್ಕಾಗಿ ಬೆಂಕಿಯನ್ನು ನಂದಿಸಲು ಹಾಗೂ ಮರ/ವನಸ್ಪತಿ ಗುಂಪುಗಳನ್ನು ಕಡಿದು ಬೆಂಕಿಯನ್ನು ಹರಡುವಿಕೆಯನ್ನು ತಡೆಯಲು ಉಪಯೋಗಿಸಬಹುದಾದ ವಿವಿಧ ರೀತಿಯ ಉಪಕರಣಗಳನ್ನು (ಉದಾಹರಣೆಗಾಗಿ: Blower, Water Sprayer, Brush Cutter, Fire Beater) ಹಾಗೂ ಬೆಂಕಿ ನಿಯಂತ್ರಣಕ್ಕಾಗಿ ನಿಯೋಜಿಸಿರುವ ಸಿಬ್ಬಂದಿಗಳಿಗೆ Water Bottles, Shoes, Gloves, Binoculars, Torch, ಮುಂತಾದವುಗಳನ್ನು ಒದಗಿಸಲಾಗುತ್ತಿದೆ. |
| ಈ) | ಅರಣ್ಯ ಸಂರಕ್ಷಣಾ ಕಾಯ್ದೆಗಳ ಅನುಷ್ಠಾನದ ಪ್ರಗತಿಯ ವಿವರ ನೀಡುವುದು? | ವನ (ಸಂರಕ್ಷಣಾ ಏವಂ ಸಂವರ್ಧನ್) ಅಧಿನಿಯಮ 1980 ಮತ್ತು ವನ (ಸಂರಕ್ಷಣಾ ಏವಂ ಸಂವರ್ಧನ್) ನಿಯಮ 2023 ರನ್ವಯ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಗಳಿಗೆ ಉಪಯೋಗಿಸಲು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಕೇಂದ್ರ ಸರ್ಕಾರವು ಅರಣ್ಯ ಪ್ರದೇಶ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ತಾತ್ವಿಕ/ಅಂತಿಮ ಅನುಮೋದನೆಯನ್ನು ಕೆಳಕಂಡ ಷರತ್ತುಗಳನ್ನು ವಿಧಿಸುವ ಮೂಲಕ ಅರಣ್ಯ ಪ್ರದೇಶವನ್ನು ಕ್ಷೇತ್ರ ನಿರ್ದಿಷ್ಟ ಚಟುವಟಿಕೆಗಳಿಗೆ ಗುತ್ತಿಗೆಯ ಮೇಲೆ ಬಿಡುಗಡೆಗೊಳಿಸಲಾಗುತ್ತಿರುತ್ತದೆ.<br>• ತಿರುವಳಿ ಮಾಡಿದ ಅರಣ್ಯ ಭೂಮಿಯನ್ನು ಮರು ಗುತ್ತಿಗೆ ನೀಡಬಾರದು.<br>• ಉಪಯೋಗಿ ಸಂಸ್ಥೆಯವರಿಂದ ಅರಣ್ಯ ಭೂಮಿಯ ನಿವ್ವಳ ಪ್ರಸ್ತುತ ಮೌಲ್ಯವನ್ನು (NPV) ರಾಜ್ಯ ಸರ್ಕಾರವು ಪಡೆಯಬೇಕು.<br>• ಒಂದು ಹೆಕ್ಟೇರ್ ಗಿಂತ ಕಡಿಮೆ ವಿಸ್ತೀರ್ಣವುಳ್ಳ ಯೋಜನೆಗಳಿಗೆ ಒಂದು ಗಿಡ/ಮರದ ಪರ್ಯಾಯವಾಗಿ 10 ಸಸಿಗಳನ್ನು ನೆಟ್ಟು ಪೋಷಿಸುವ ಅಥವಾ ಕನಿಷ್ಠ 100 ಗಿಡಗಳನ್ನು ನೆಟ್ಟು ಪೋಷಿಸುವ ವೆಚ್ಚ ಪಾವತಿ ಷರತ್ತು (1:10 time Compensatory Plantation OR Minimum 100 tree plantation Cost).<br>• ಒಂದು ಹೆಕ್ಟೇರ್ ಹಾಗೂ ಮೇಲ್ಪಟ್ಟ ಅರಣ್ಯ ವಿಸ್ತೀರ್ಣದ ಪ್ರಸ್ತಾವನೆಗಳಲ್ಲಿ ಉಪಯೋಗಿ ಸಂಸ್ಥೆಯು ಉದ್ದೇಶಿತ ಅರಣ್ಯ ಪ್ರದೇಶಕ್ಕೆ ಸಮನಾದ ಮತ್ತು ಅರಣ್ಯಕ್ಕೆ ಹೊಂದಿಕೊಂಡಿರುವ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಯೋಗ್ಯ ಅರಣ್ಯೇತರ ಅಥವಾ ಖಾಸಗಿ ಜಮೀನನ್ನು [Compensatory Afforestation Land i.e., Revenue Land / Patta Land] ಅರಣ್ಯ ಇಲಾಖೆಗೆ ಶಾಶ್ವತವಾಗಿ ನೀಡಬೇಕು.<br>• ಉಪಯೋಗಿ ಸಂಸ್ಥೆಯವರು ಅರಣ್ಯ ಇಲಾಖೆಗೆ ನೀಡಿದ ಅರಣ್ಯೇತರ ಅಥವಾ ಖಾಸಗಿ ಜಮೀನಿನಲ್ಲಿ ಅರಣ್ಯೀಕರಣಕ್ಕಾಗಿ ಪರಿಹಾರಾತ್ಮಕ ನೆಡುತೋಪು (Compensatory Afforestation Charges) ವೆಚ್ಚದ ಪಾವತಿ ಮಾಡಬೇಕು.<br>• ಬಿಡುಗಡೆಗೊಳಿಸಲಾದ ಅರಣ್ಯ ಭೂಮಿಯ ಗಡಿಯನ್ನು ಯೋಜನೆಯ ವೆಚ್ಚದಲ್ಲಿ ನಾಲ್ಕು ಅಡಿ ಎತ್ತರದ ಬಲವರ್ಧಿತ ಸಿಮೆಂಟ್ ಕಾಂಕ್ರೀಟ್ ಕಂಬಗಳನ್ನು ನಿರ್ಮಿಸುವ ಮೂಲಕ ನೆಲದ ಮೇಲೆ ಗುರುತಿಸಬೇಕು, ಪ್ರತಿಯೊಂದಕ್ಕೂ ಅದರ ಸರಣಿ ಸಂಖ್ಯೆ, ಮುಂದಕ್ಕೆ ಮತ್ತು ಹಿಂದಕ್ಕೆ ಬೇರಿಂಗ್ ಮತ್ತು ಕಂಬದಿಂದ ಕಂಬದವರೆಗಿನ ಅಂತರವನ್ನು ಸೂಚಿಸಬೇಕು.<br>• ಪ್ರಸ್ತಾವನೆಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶವನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ಬಳಸಬಾರದು.<br>• ಕಡಿಯಲು ಗುರುತಿಸಲಾದ ಗರಿಷ್ಠ ಸಂಖ್ಯೆಯ ಮರಗಳ ಸ್ಥಳಾಂತರದ ಸಾಧ್ಯತೆಯನ್ನು ಉಪಯೋಗಿ ಸಂಸ್ಥೆಯವರು ಅನ್ವೇಷಿಸಬೇಕು ಮತ್ತು ಯಾವುದೇ ಮರ ಕಡಿಯುವಿಕೆಯನ್ನು ಅನಿವಾರ್ಯವಾದಾಗ ಮಾತ್ರ ಮಾಡಬೇಕು ಮತ್ತು ಅದು ಕೂಡ ರಾಜ್ಯ ಅರಣ್ಯ ಇಲಾಖೆಯ ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ಮಾಡಬೇಕು.<br>• ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಇಲ್ಲದೆ ಪ್ರಸ್ತಾವನೆಯ ವಿನ್ಯಾಸ ಯೋಜನೆಯನ್ನು ಬದಲಾಯಿಸಬಾರದು. |

ಸಂಖ್ಯೆ: ಅಪಜೀ 46 ಎಫ್ಎಎಫ್ 2026

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು